# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.</u>

## <u>ಪ್ರಕರಣ ಸಂಖ್ಯೆ: ಎಸ್.ಸಿ.136/2024</u>

ಅಸಾ : 10
ಚಾಸಾ : 20

| | | |
|---|---|---|
| ಸಾಕ್ಷಿದಾರರ ಹೆಸರು | : | ಮೋಹನ ಸೊರಟೂರ |
| ತಂದೆಯ ಹೆಸರು | : | ಕೃಷ್ಣಾಜಿ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ಪಿ.ಎಸ್.ಐ., ಡಿ.ಸಿ.ಆರ್.ಬಿ. ಹಾವೇರಿ |
| ವಾಸ ಸ್ಥಳ | : | ಹಾವೇರಿ. |

ದಿನಾಂಕ: **09/12/2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ: –</u>**

1. 2024 ರಲ್ಲಿ ನಾನು ಹಾವೇರಿ ಶಹರ ಪೊಲೀಸ ಠಾಣೆಯ ಪಿ.ಎಸ್.ಐ. ಎಂದು ಕೆಲಸ ಮಾಡಿದ್ದೇನೆ.

2. ದಿನಾಂಕ:09/08/2024 ರಂದು ಸಂಜೆ 5.00 ಘಂಟೆಗೆ ನಾನು ಠಾಣೆ ಯಲ್ಲಿದ್ದಾಗ ಚಾಸಾ-1 ಠಾಣೆಗೆ ಹಾಜರಾಗಿ ನಿಪಿ-7 ಗಣಕೀಕೃತ ದೂರನ್ನು ಪಡೆದು ಗುನ್ನೆ ಸಂಖ್ಯೆ 139/2024 ರಲ್ಲಿ ಪ್ರಕರಣ ನೋಂದಾಯಿಸಿಕೊಂಡೆ. ಪ್ರ.ವ.ವರದಿಯನ್ನು ಈಗ ನಿಪಿ-17 ಮತ್ತು ನನ್ನ ಸಹಿಗಳನ್ನು ನಿಪಿ-7(ಬಿ) ಮತ್ತು ನಿಪಿ-17(ಎ) ಎಂದು ಗುರುತಿಸಲಾಯಿತು. ನಿಪಿ-7 ಮತ್ತು 17 ನ್ನು ನ್ಯಾಯಾಲಯಕ್ಕೆ ಮತ್ತು ಪ್ರಕರಣದ ಪ್ರತಿಗಳನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಿದೆ.

3. ಚಾಸಾ-10 ರಿಂದ 12 ರನ್ನು ಚಳಗೇರಿ ಮತ್ತು ಬಂಕಾಪುರ ಟೋಲ್ ಬಳಿಗೆ ಕಳಿಸಿ ವಾಹನ ಸಂಚಾರದ ಮಾಹಿತಿ ಪಡೆಯಲು ತಿಳಿಸಿದೆ. ಸಿಬ್ಬಂದಿ ಮೂಲಕ ಚಾಸಾ-2 ಮತ್ತು 3 ಪಂಚರನ್ನು ಕರೆಯಿಸಿ ಚಾಸಾ-1 ತೋರಿಸಿದ ಜಾಗೆಯನ್ನು ಪರಿಶೀಲಿಸಿ ನಿಪಿ-8 ಪಂಚನಾಮೆ ತಯಾರಿಸಿದೆ. ನನ್ನ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು. ನಿಪಿ-8 ರ ಕಾಲಕ್ಕೆ ನಕ್ಷೆ ತಯಾರಿಸಿ ಪೋಟೋ ಪಡೆದೆ. ಪೋಟೋಗಳನ್ನು ನಿಪಿ-9 ಮತ್ತು 10 ಎಂದು ಗುರುತಿಸಿದ್ದು, ನಕ್ಷೆಯನ್ನು ನಿಪಿ-8(ಸಿ) ಹಾಗೂ ನನ್ನ ಸಹಿಯನ್ನು ನಿಪಿ-8(ಡಿ) ಎಂದು ಗುರುತಿಸಲಾಯಿತು.

4. ಚಾಸಾ-6 ಮತ್ತು 7 ರ ಹೇಳಿಕೆ ಪಡೆದೆ. ಗುನ್ನೆ ಜಾಗೆಯ ಹತ್ತಿರದ ಟವರ್ ಮೂಲಕ ಮಾಡಲಾದ ಕರೆಗಳ ವಿವರ ನೀಡುವಂತೆ ಮನವಿ ಸಲ್ಲಿಸಿದೆ. ಮಾಹಿತಿ ಸಿಗಲಿಲ್ಲ. ಕಡತವನ್ನು ಮುಂದಿನ ತನಿಖೆ ಕುರಿತು ಚಾಸಾ-22 ರಿಗೆ ಸಲ್ಲಿಸಿದೆ.

**ಪಾಟೀ ಸವಾಲು 1 ಮತ್ತು 2 ನೇ ಆರೋಪಿತರ ಪರ ಶ್ರೀ ಎನ್.ಜಿ.ಎಚ್. ವಕೀಲರಿಂದಃ–**

5. ನಿಪಿ-8(ಸಿ) ಯಲ್ಲಿ ಗುನ್ನೆ ಸಂಖ್ಯೆಯನ್ನು ಕೈಯಿಂದ ಬರೆದು ತಿದ್ದಲಾಗಿದೆ ಎನ್ನುವುದು ನಿಜ. ನಕ್ಷೆಗೆ ಪಂಚರ ಸಹಿ ಪಡೆದಿಲ್ಲ ಎನ್ನುವುದು ನಿಜ. ನಿಪಿ-9 ಮತ್ತು 10 ಪೋಟೋ ಪಡೆದ ಸಿಬ್ಬಂದಿ ಹೆಸರನ್ನು ಪಂಚನಾಮೆಯಲ್ಲಿ ನಮೂದಿಸಿಲ್ಲ. ಪೋಟೋಗಳಲ್ಲಿ ದಿನಾಂಕ ಮತ್ತು ಸಮಯ ನಮೂದಾಗಿಲ್ಲ. ನಿಪಿ-8 ಮತ್ತು ನಕ್ಷೆಗೂ ಹೊಂದಾಣಿಕೆ ಇಲ್ಲ ಎನ್ನುವುದು ಸುಳ್ಳು. ಗುನ್ನೆ ಜಾಗೆ ಮತ್ತು ತೋಟದಯಲ್ಲಾಪುರ ಬ್ರಿಡ್ಜ ನಡುವೆ ಇರುವ ಅಂತರ ನಕ್ಷೆಯಲ್ಲಿ ತೋರಿಸಿಲ್ಲ ಎನ್ನುವುದು ಸುಳ್ಳು. ಚಾಸಾ-2 ಮತ್ತು 3 ಚಾಸಾ-1 ರ ಸಂಬಂಧಿಕರು ಎಂದರೆ ದೂರದಿಂದ ಇರಬಹುದು.

6. ಚಾಸಾ-6 ಮತ್ತು 7 ರ ಹೇಳಿಕೆಯನ್ನು ಸೃಷ್ಟಿಸಿದ್ದೇನೆ ಎನ್ನುವುದು ಸುಳ್ಳು. ನಿಪಿ-7 ನ್ನು ಎಲ್ಲಿ ತಯಾರಿಸಲಾಗಿದೆ ಎಂದು ನಾನು ಚಾಸಾ-1 ರನ್ನು ವಿಚಾರಿಸಿಲ್ಲ. ತೋಟದಯಲ್ಲಾಪುರ ಬ್ರಿಡ್ಜನಿಂದ ಹಾವೇರಿಯ ಜಿ.ಎಚ್. ಕಾಲೇಜಿನವರೆಗೆ ಯಾವಾಗಲೂ ಜೀಪು ಓಡಾಡುತ್ತಿರುತ್ತದೆ ಎನ್ನುವುದು ನಿಜ. ತೋಟದಯಲ್ಲಾಪುರ ಬ್ರಿಡ್ಜ ಹತ್ತಿರ ರಾತ್ರಿ ಗಸ್ತಿನ ಪೋಲೀಸರು ಇರುತ್ತಾರೆ ಎನ್ನುವುದು ನಿಜ. ಘಟನೆ ದಿನ ರಾತ್ರಿ ಅಲ್ಲಿ ಕರ್ತವ್ಯದ ಮೇಲಿದ್ದ ಸಿಬ್ಬಂದಿ ವಿವರ ಹೇಳಲು ಬರುವುದಿಲ್ಲ. ರಾತ್ರಿ ಗಸ್ತಿನ ಕರ್ತವ್ಯದಲ್ಲಿದ್ದ ಸಿಬ್ಬಂದಿಯನ್ನು ಕರೆದು ನಾನು ವಿಚಾರಿಸಿಲ್ಲ. ಚಾಸಾ-1 ಸುಳ್ಳು ದೂರು ಕೊಟ್ಟಿದ್ದು, ನಾನು ಪ್ರಕರಣವನ್ನು ನೋಂದಾಯಿಸಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

7. ನಾನು ಗುನ್ನೆ ಜಾಗೆಗೆ ಹೋಗಿಲ್ಲ, ಪಂಚನಾಮೆ ಹಾಗೂ ನಕ್ಷೆ ತಯಾರಿಸಿಲ್ಲ ಮತ್ತು ಪೋಟೋ ಪಡೆದಿಲ್ಲ ಎನ್ನುವುದು ಸುಳ್ಳು.

**ಪಾಟೀ ಸವಾಲು 3 ನೇ ಆರೋಪಿ ಪರ ಶ್ರೀ ಪಿ.ಬಿ.ಸಿ. ವಕೀಲರಿಂದಃ–**

*(ಮೇಲಿನ ಪಾಟೀ ಸವಾಲನ್ನು ಅನುಮೋದಿಸಿರುತ್ತಾರೆ.)*

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.